ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 207

ಸದಸ್ಯರ ಹೆಸರು: ಶ್ರೀ ಮುನಿರಾಜು ಗೌಡ ಪಿ.ಎಂ(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು ಮಾನ್ಯ ಗಣಿ ಮತ್ತು ಭೂ, ವಿಜ್ಞಾನ , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಉತ್ತರಿಸಬೇಕಾದ ದಿನಾಂಕ 20.12.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರಿನ ಟ್ರಾಫಿಕ್ ಸಿಗ್ನಲ್ ಗಳಲ್ಲಿ ಮಕ್ಕಳನ್ನು ಬಳಸಿ ಭಿಕ್ಷಾಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸದರಿ ಮಕ್ಕಳನ್ನು ರಕ್ಷಿಸಿ ಪಾಲನಾ ಮಂದಿರದಲ್ಲಿ ಷೋಷಿಸಲು ಸರ್ಕಾರ ಕೈಗೊಂಡ ಕ್ರಮವೇನು:	ಬೆಂಗಳೂರಿನ ಟ್ರಾಫಿಕ್ ಸಿಗ್ನಲ್ ಗಳಲ್ಲಿ ಮಕ್ಕಳನ್ನು ಬಳಸಿ ಭಿಕ್ಷಾಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಮಕ್ಕಳನ್ನು ರಕ್ಷಿಸಿ ಬಾಲಮಂದಿರದಲ್ಲಿ ಷೋಷಿಸಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ. 1. ರಾಜ್ಯದಲ್ಲಿ ಭಿಕ್ಷಾಟನೆಯನ್ನು ತಡೆಗಟ್ಟಲು/ ನಿಷೇಧಿಸಲು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ರಕ್ಷಣಾ ಕಾರ್ಯಚರಣೆಯನ್ನು ಕೈಗೊಳ್ಳಲು ತಂಡಗಳನ್ನು ರಚಿಸಲಾಗಿದೆ. ಹಾಗೂ ಸದರಿ ತಂಡಗಳಿಗೆ ಅಗತ್ಯ ತರಬೇತಿಯನ್ನು ನೀಡಲಾಗಿದೆ. 2. ಎಲ್ಲಾ ಇಲಾಖೆಯ ಮುಖ್ಯಸ್ಥರುಗಳಿಗೆ ಭಿಕ್ಷೆ ಬೇಡುತ್ತಿರುವ ಮಕ್ಕಳು ಹಾಗೂ ಮಹಿಳೆಯರೊಂದಿಗೆ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ:-1098ಗೆ ಮಾಹಿತಿ ನೀಡಲು ಸೂಚಿಸಲಾಗಿದೆ 3. ಅಲ್ಲದೇ ದೇವಸ್ಥಾನ ಹಿಮಾಪ್ರದೇಶ, ಮಾರುಕಟ್ಟೆ, ರೈಲ್ವೆ ನಿಲ್ದಾಣ ಮತ್ತು ಇತರೆ ಸಾರ್ವಜನಿಕ ಪ್ರದೇಶಗಳಲ್ಲಿ ಭಿಕ್ಷೆ ಬೇಡುವ ಮಕ್ಕಳು ಮಹಿಳೆಯರು ಹಾಗೂ ಮಹಿಳೆಯರೊಂದಿಗೆ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ:-1098ಗೆ ಕರೆ ಮಾಡಲು ಪ್ರಕಟಣೆ ಹೊರಡಿಸಲಾಗಿದೆ ಹಾಗೂ ಭಿಕ್ಷಾಟನೆಯ ವಿರುದ್ಧ ಸಮರದ ಕುರಿತು ಪ್ರಮಾಣ ವಚನ (Oath)ಪಡೆಯಲಾಗಿದೆ. ಈ ಸಂಬಂಧ ಇನ್ಫಾರ್ಮೇಷನ್, ಎಜುಕೇಷನ್ ಕಮ್ಯೂನಿಕೇಷನ್ (ಐ.ಇ.ಸಿ) ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. 4. ಭಿಕ್ಷಾಟನೆಯಿಂದ ರಕ್ಷಿಸಿದ ಮಕ್ಕಳನ್ನು ಬಾಲಮಂದಿರಗಳಲ್ಲಿ (ಬಾಲಕ/ಬಾಲಕಿಯರ, ಅನುಪಾನಾಗೃಹ, ಮನೋವಿಕಲ ಬುದ್ಧಿಮಾಂದ್ಯ ಬಾಲಮಂದಿರ) ಪಾಲನೆ ಮತ್ತು ರಕ್ಷಣೆ ಒದಗಿಸಲಾಗುತ್ತಿದೆ. ಈ ಮಕ್ಕಳಿಗೆ ಔಪಚಾರಿಕ ಶಿಕ್ಷಣದೊಂದಿಗೆ ಬಾಲನ್ಯಾಯ ನಿಧಿಯಡಿ ಕೌಶಲ್ಯಾಭಿವೃದ್ಧಿ, ವೃತ್ತಿ ತರಬೇತಿ ಹಾಗೂ ಉನ್ನತ ಶಿಕ್ಷಣಕ್ಕೆ ಬೆಂಬಲ ಒದಗಿಸಲಾಗುತ್ತಿದೆ. 5. 16 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಗಂಡು ಮಕ್ಕಳನ್ನು ಹಾಗೂ 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳು, ಸಿಗ್ನಲ್ ಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವುದು ಕಂಡುಬಂದಲ್ಲಿ ಅಂತಹವರನ್ನು ಬಂಧಿಸಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ವಶಕ್ಕೆ ನೀಡಲಾಗುತ್ತಿದೆ.

ಆ)	ಭಿಕ್ಷಾಟನೆಯಲ್ಲಿ ತೊಡಗಿರುವ ಮಹಿಳೆಯರನ್ನು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿರಿಸಲು ಸರ್ಕಾರ ಕೈಗೊಂಡ ಕ್ರಮವೇನು:	ಕರ್ನಾಟಕ ಭಿಕ್ಷಾಟನಾ ನಿಷೇದ ಅಧಿನಿಯಮ, 1975ರ ಸೆಕ್ಷನ್ 3 ರನ್ವಯ ರಾಜ್ಯದಲ್ಲಿ ಭಿಕ್ಷಾಟನೆಯನ್ನು ನಿಷೇಧಿಸಲಾಗಿದ್ದು, ಸದರಿ ಅಧಿನಿಯಮದನ್ವಯ 16 ವರ್ಷ ಮೇಲ್ಪಟ್ಟ ಪುರುಷರು ಹಾಗೂ 18 ವರ್ಷ ಮೇಲ್ಪಟ್ಟ ಮಹಿಳೆಯರು ಭಿಕ್ಷಾಟನೆಯಲ್ಲಿ ತೊಡಗಿದ್ದಲ್ಲಿ ಅಂತಹ ಭಿಕ್ಷುಕರನ್ನು ಬಂಧಿಸಿ, ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ರಕ್ಷಣೆ ಒದಗಿಸಲಾಗುತ್ತಿದೆ. ಭಿಕ್ಷಾಟನೆ ಮಾಡುತ್ತಿ ವವರನ್ನು ಬಂಧಿಸಿ ಸೆಕ್ಷನ್ 11 (3,4,5) ರ ಪ್ರಕಾರ ಕ್ರಮ ತೆಗೆದುಕೊಂಡು ತಾಲ್ಲೂಕು ದಂಡಾಧಿಕಾರಿಗಳ ಮುಂದೆ ಹಾಜರುಪಡಿಸಿ ಅವರ ಆದೇಶದನ್ವಯ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಇರಿಸಲಾಗುವುದು. ಭಿಕ್ಷುಕರ/ನಿರಾಶ್ರಿತರ ಬಂಧನದ ಅವಧಿಯ ಕನಿಷ್ಟ 1 ವರ್ಷದಿಂದ ಗರಿಷ್ಟ 3 ವರ್ಷದವರೆಗೆ ಇರುತ್ತದೆ. ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ನಿರಾಶ್ರಿತರಿಗೆ ಮೂಲಭೂತ ಸೌಕರ್ಯಗಳಾದ ಉಪಹಾರ ಮತ್ತು ಊಟ, ಸಮವಸ್ತ್ರ, ಹಾಸಿಗೆ-ಹೊದಿಕೆ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ, ಮನರಂಜನೆ ಮತ್ತು ತರಬೇತಿಗಳ ಕಾರ್ಯಕ್ರಮಗಳಲ್ಲಿ ತೊಡಗಿಸಲಾಗುತ್ತದೆ.
ಇ)	ಭಿಕ್ಷಾಟನೆಯಲ್ಲಿ ತೊಡಗಿರುವ/ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಇರುವವರ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮವೇನು:	ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ 1975ರ ನಿಯಮ 39(I)ರ ಪ್ರಕಾರ ಪರಿಹಾರ ಕೇಂದ್ರಕ್ಕೆ ಬಂದಿರುವ ತಾಯಿಯ ಪಾಲನೆಯಲ್ಲಿರುವ 7 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಗುವನ್ನು ಯಾರೇ ಸಂಬಂಧಿ ಅಥವಾ ಅನ್ಯತಾ ಬೇರೊಬ್ಬರಲ್ಲಿ ಇರಿಸಲು ಸಾಧ್ಯವಾಗದಿದ್ದರೆ, ಆಕೆಯೊಂದಿಗೆ ಇರಲು ಅನುಮತಿಸಬಹುದು. ಆ ಮಗು 7 ವರ್ಷಗಳಿಗಿಂತ ಕಡಿಮೆ ಇರುವುದೇ ಅಥವಾ ಇಲ್ಲವೇ ಎಂಬ ಬಗ್ಗೆ ವಿವಾದ ಉದ್ಭವಿಸಿದರೆ ಅದನ್ನು ಮೇಲ್ವಿಚಾರಣೆ ಅಧಿಕಾರಿಯು ತೀರ್ಮಾನಿಸುತ್ತಾರೆ. ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ 1975ರ ನಿಯಮ 39 (II) ರ ಪ್ರಕಾರ ಪರಿಹಾರ ಕೇಂದ್ರದಲ್ಲಾಗಲೀ ಅಥವಾ ಹೊರಗಡೆಯಾಗಲೀ ಯಾವುದೇ ಸಂಬಂಧಿ ಅಥವಾ ಇತರೆ ವಿಶ್ವಾಸಾರ್ಹ ವ್ಯಕ್ತಿ ಸುಂದೆ ಬಂದರೆ 7 ವರ್ಷಗಳಿಗಿಂತ ಮೇಲೆ ಮತ್ತು 12 ವರ್ಷಗಳಿಗಿಂತ ಕಡಿಮೆ ವಯಸ್ಸು ಇರುವ ಎಲ್ಲಾ ಮಕ್ಕಳ ನಿರ್ವಹಣೆ ಮತ್ತು ತರಬೇತಿಗೆ ಏರ್ಪಾಟುಗಳನ್ನು ಮಾಡತಕ್ಕದ್ದು, ಮೇಲ್ಕಂಡ ಎರಡೂ ನಿಯಮಗಳಲ್ಲಿ ತಿಳಿಸಿರುವಂತಹ ಪ್ರಕರಣಗಳು ಯಾವುದು ಇರುವುದಿಲ್ಲ. ಭಿಕ್ಷಾಟನೆಯಲ್ಲಿ ತೊಡಗಿರುವ/ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಇರುವವರ ಮಕ್ಕಳ ಶಿಕ್ಷಣಕ್ಕಾಗಿ, ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಪ್ರತ್ಯೇಕವಾಗಿ ಕ್ರಮವಹಿಸಲಾಗುತ್ತಿರುವುದಿಲ್ಲ, ಆದರೆ ಅಂತಹ ಮಕ್ಕಳು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015 ಕಾಗೂ ತಿದ್ದುಪಡಿಯಾಯ್ದೆ 2021ರನ್ವಯ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವುದು ಗುರುತಿಸಲ್ಪಟ್ಟಲ್ಲಿ ಮಕ್ಕಳಿಗೆ ಮಕ್ಕಳ ಕಲ್ಯಾಣ ಸಮಿತಿಯ ಆದೇಶದನ್ವಯ ಬಾಲಮಂದಿರಗಳಲ್ಲಿ ದಾಖಲಿಸಿಕೊಂಡು, ಬಾಲಮಂದಿರದ ಮಕ್ಕಳೊಂದಿಗೆ ಈ ಮಕ್ಕಳಿಗೂ ಸಹ ಶಿಕ್ಷಣ ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಈ)	ಭಿಕ್ಷಾಟನೆಯಲ್ಲಿ ತೊಡಗಿರುವವರನ್ನು ಎಷ್ಟು ಅವಧಿಯವರೆಗೆ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಇರಿಸಲಾಗುತ್ತದೆ: ಸದರಿ ಪರಿಹಾರ ಕೇಂದ್ರದಲ್ಲಿ ಅವರು ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗುವಂತಹ ತರಬೇತಿ ನೀಡಲಾಗುತ್ತಿದೆಯೇ: ನೀಡಲಾಗುತ್ತಿದ್ದಲ್ಲಿ ಯಾವ ರೀತಿಯ ತರಬೇತಿ ನೀಡಲಾಗುತ್ತಿದೆ? (ವಿವರ ನೀಡುವುದು)	ಭಿಕ್ಷಾಟನೆಯಲ್ಲಿ ತೊಡಗಿರುವವರನ್ನು ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಕನಿಷ್ಟ 1 ವರ್ಷದಿಂದ ಗರಿಷ್ಟ 3 ವರ್ಷಗಳವರೆಗೆ ಇರಿಸಲಾಗುತ್ತದೆ. ನಿರಾಶ್ರಿತರು ಸ್ವಾವಲಂಬಿ ಜೀವನ ನಡೆಸಲು ಸಹಕಾರಿಯಾಗುವಂತೆ ಹೊಲಿಗೆ ತರಬೇತಿ, ಕೃಷಿ ಹಾಗೂ ತೋಟಗಾರಿಕೆ, ಪಶು ಸಂಗೋಪನೆ, ಕುರಿ ಸಾಕಾಣಿಕೆ, ಹ್ಯಾಂಡ್ ಲೂಮ್, ಪವರ್ ಲೂಮ್, ನೇಯ್ಗೆ ತರಬೇತಿ, ತೆಂಗಿನ ನಾರಿನ ಮ್ಯಾಟ್ ತಯಾರಿಕೆ, ಫೆನಾಯಿಲ್, ಸೋಪ್ ಮಾಟರ್, ಬ್ಲೀಚಿಂಗ್ ಪೌಡರ್, ಫ್ಯೂಲ್ ಯ್ಯಾಪರ್ ಸಿದ್ಧಪಡಿಸುವುದು, ಮುಂತಾದ ತರಬೇತಿಗಳನ್ನು ನೀಡಲಾಗುವುದು. ತರಬೇತಿ ಅವಧಿಯಲ್ಲಿ ಪ್ರತಿ ನಿರಾಶ್ರಿತರಿಗೆ ಪ್ರತಿ ದಿನದ 8 ಗಂಟೆಗಳ ಅವಧಿಗೆ ರೂ. 75/- ರಂತೆ ಹಾಗೂ 8 ಗಂಟೆಗಳಿಗಿಂತ ಕಡಿಮೆ ಅವಧಿ ತರಬೇತಿಗೆ ರೂ.38/- ರಂತೆ ತರಬೇತಿ ಭತ್ಯೆ, ದಿನಗೂಲಿ ನೀಡಲಾಗುತ್ತಿದೆ. ಈ ಭತ್ಯೆಯನ್ನು ನಿರಾಶ್ರಿತರ ಉಳಿತಾಯ ಖಾತೆಗೆ ಜಮೆ ಮಾಡಲಾಗುತ್ತದೆ. ನಿರಾಶ್ರಿತರು ಬಿಡುಗಡೆಯಾದ ಸಮಯದಲ್ಲಿ ಉಳಿತಾಯ ಖಾತೆಯ ಪಾಸ್ ಬುಕ್ ನ್ನು ಸದರಿಯವರಿಗೆ ನೀಡಲಾಗುತ್ತದೆ.

ಸಂಖ್ಯೆ: ಮಮಇ 140 ಮಭಾಬ 2022

Halappa BA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು.